

## ನಿರ್ದೇಶಕ ರಾಡೊವನೊವಿಕ್ (Radovanovic)

ಬೆಲ್‌ಗ್ರೇಡ್‌ನಲ್ಲಿ ಜನಿಸಿದ ರಾಡೊವನೊವಿಕ್ ಆರ್ಟ್ ಹಿಸ್ಟರಿ ಪದವೀಧರ. ಆ್ಯಂಬುಲನ್ಸ್ ಮತ್ತು ಎನ್‌ಕ್ಲೇವ್ ಅವರ ಪ್ರಮುಖ ಚಲನಚಿತ್ರಗಳು. ಅವರ ಹಲವಾರು ಸಾಕ್ಷ್ಯಚಿತ್ರ ಮತ್ತು ಕಿರುಚಿತ್ರಗಳು ವಿಶ್ವದ ಹಲವೆಡೆ ಪ್ರದರ್ಶನಗೊಂಡಿವೆ. ಸಿನಿಮಾ ಒಂದು ವಿಸ್ತೃತ ಚರ್ಚೆ ಎನ್ನುವ ನೆಲೆಯಲ್ಲಿಯೇ  ಅವರು ಚಲನಚಿತ್ರಗಳನ್ನು ರೂಪಿಸಿಕೊಟ್ಟವರು. ಅವರ ಚಿತ್ರಗಳ ವಸ್ತು ಜಾಗತಿಕವಾದ್ದು. ಒಟ್ಟು ಸಿನೆ ಮಾಧ್ಯಮದಲ್ಲಿ ಬರಹಗಾರನಾಗಿ, ಶಿಕ್ಷಕನಾಗಿ ಮತ್ತು ನಿರ್ದೇಶಕನಾಗಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡವರು. ಹಲವಾರು ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಇವರ ಕೃತಿಗಳು ಪ್ರದರ್ಶನಗೊಂಡಿವೆ.

---

ದೇಶಕ್ಕೇ ಮಾಡುತ್ತಿರುವ ಅಪರಾಧವಾಗಿ ಕಾಣಿಸುತ್ತದೆ! ಅವರ ತಪ್ಪುಗಳನ್ನೇ ಹುಡುಕುವುದು ಅಥವಾ ತಪ್ಪಿತಸ್ಥರು ಎಂದು ನಿರೂಪಿಸುವುದು ಬಹುಸಂಖ್ಯಾತರ ತಾಕತ್ತು ಮತ್ತು ಅಗಾಧ 'ದೇಶಭಕ್ತಿ' ಎಂದು ಬಿಂಬಿತವಾಗುವುದು ದುರದೃಷ್ಟಕರ. ಕಳ್ಳತನದಲ್ಲಿ, ಹಿಂಸೆಯಲ್ಲಿ, ದೇಶ ಮತ್ತದರ ಮಣ್ಣಿಗೆ ತೋರುವ ಭಕ್ತಿಭಾವ, ನಿಷ್ಠೆಯ ವಿಷಯದಲ್ಲಿ ಅಲ್ಪಸಂಖ್ಯಾತರನ್ನು ಅವರ ಆಚರಣೆಯ ಮಿತಿಗಳ ಲೆಕ್ಕಿಸದೇ ಇಕ್ಕಟ್ಟಿಗೆ ಸಿಕ್ಕಿಸುವುದು ನಡೆಯುತ್ತದೆ. ಇಲ್ಲಿ ನಡೆಯುವುದು ಕೂಡ ಅದೇ. ಸಹಬಾಳ್ವೆ ಅಸಹನೀಯವಾದಾಗ ಮನುಷ್ಯನೊಳಗಿನ ಕ್ರೌರ್ಯ ವಿಷದ ಹಾವಿನಂತೆ ನಿರಂತರ ಹೆಡೆಯಾಡುತ್ತಲೇ ಇರುವಂಥದು. ಇದು ನಾಗರಿಕತೆಗಳು ಕಟ್ಟಿಕೊಂಡ ಧಾರ್ಮಿಕ ಮತ್ತು ರಾಜಕೀಯ ಅಧಿಕಾರದ ಉನ್ಮಾದ ಎನ್ನುವುದು ಚಿತ್ರದ ಒಳದನಿ.

ಒಂದು ವಿಷಮ ಸಂದರ್ಭದಲ್ಲಿ ನೆನಾದ್ ಅಜ್ಜನ ಅಂತ್ಯ ಸಂಸ್ಕಾರ ಶತ್ರು ಪಾಳೆಯಕ್ಕೆ ಸೇರಿದ ಸ್ಮಶಾನದಲ್ಲೇ ನಡೆಯುವುದು ಚಿತ್ರ ಕಟ್ಟಿಕೊಡುವ ಅತ್ಯಂತ ಮಹತ್ವದ ಸೂಕ್ಷ್ಮ. ಮತ್ತೊಂದೆಡೆ ಕಣ್ಣಾಮುಚ್ಚಾಲೆ ಆಟದಲ್ಲಿ ನೆನಾದ್‌ಗೆ ಅಡಗುವ ಪಾಳಿ ಬರುತ್ತದೆ. ಆತ ಸಂಪ್ರದಾಯವಾದಿ ಚರ್ಚ್‌ನ ನೇತಾಡುವ ದೊಡ್ಡ ಗಂಟೆ ಕೆಳಗೆ ಅಡಗುತ್ತಾನೆ. ಅವನ ಅಲ್ಬೇನಿಯನ್ ಗೆಳೆಯ ಬಸ್ಕಿಂ (ಡೆನಿಸ್ ಮುರಿಕ್) ಕೈಯಲ್ಲಿ ಗನ್ ಇದೆ. ಹೊರಗಿನ ಯುದ್ಧ ಸೃಷ್ಟಿಸಿದ ಒತ್ತಡದಿಂದ ಆತ ಶೂಟ್ ಮಾಡುವವನಂತೆ ನಿಂತಿದ್ದಾನೆ. ಇದ್ದಕ್ಕಿದ್ದಂತೆ ಗುಂಡು ಸಿಡಿಯುವ ಸದ್ದು. ಅದು ಬಸ್ಕಿಂ ಬಂದೂಕಿನಿಂದ ಸಿಡಿದಿದ್ದಾ? ಮಿಲಿಟರಿ ಟ್ಯಾಂಕರ್‌ಗಳ ಮೂಲಕ ಸಿಡಿದಿದ್ದಾ?... ಅಂತೂ ಗಂಟೆ ನೆಲಕ್ಕೊರಗುತ್ತದೆ, ನೆನಾದ್ ಟ್ರ್ಯಾಪ್ ಆಗುತ್ತಾನೆ. ಬಸ್ಕಿಂ ಕಾಲಿಗೂ ಗಾಯ; ಎದ್ದು ಓಡಾಡದಷ್ಟು.

* * *

ಅತ್ತ ಬಸ್ಕಿಂ ಗಾಯಕ್ಕೆ ಚಿಕಿತ್ಸೆ, ಮತ್ತವನ ಚೌಕಾಸಿ ನಡೆಯುತ್ತಿದ್ದರೆ. ಮತ್ತೊಂದೆಡೆ